

# ಡೋಂಟ್ ಕೇರ್!

ಹೀಗೆಂದು ತುಸು ಕೋಪದಿಂದಲೇ ಹೇಳಿರುವುದು ಗುಂಡು ಮುಖದ ಚೆಲುವೆ ಸೋನಾಕ್ಷಿ ಸಿನ್ಹಾ. ಆಕೆ ಸಿಟ್ಟಾಗಿರುವುದು ತನ್ನಂತಹ ಸೆಲೆಬ್ರಿಟಿಗಳ ಕುರಿತು ಹೀಗೆ, ಹಾಗೆ ಎಂದು ಊಹಾಪೋಹದ ಸುದ್ದಿಗಳನ್ನು ಹರಡುವವರ ಬಗ್ಗೆ. 'ಮುಖ್ಯವಾಹಿನಿಯಲ್ಲಿರುವ ವ್ಯಕ್ತಿಗಳನ್ನು ಯಾವಾಗಲೂ ಅವರು ಹೀಗೆಯೇ ಎಂದು ತೀರ್ಮಾನಿಸಲಾಗುತ್ತದೆ. ಅದರಲ್ಲೂ ನಟಿಯರನ್ನಂತೂ ನಿರಂತರ ಬೆನ್ನುಹತ್ತುತ್ತಾರೆ. ಸಿನಿಮಾ ವೃತ್ತಿ ನೀಡುವ ತೊಂದರೆಗಳಲ್ಲಿ ಇದೂ ಒಂದು' ಎಂದಿದ್ದಾಳೆ ಸೋನಾಕ್ಷಿ.

'ನನ್ನ ದೇಹಾಕೃತಿ ಮತ್ತು ಚರ್ಮದ ಕುರಿತು ನನಗೆ ಸದಾ ಆತ್ಮವಿಶ್ವಾಸವಿರುತ್ತದೆ. ನನ್ನ ಕುರಿತು ಯೋಚಿಸುವ ಜನರತ್ತ ನಾನು ಹೆಚ್ಚು ಗಮನ ಕೊಡುವುದಿಲ್ಲ. ಹೀಗೆ ನೀವು ಒತ್ತಡಕ್ಕೆ ಸಿಲುಕಿದರೆ ಹುಚ್ಚರಾಗುತ್ತೀರಷ್ಟೇ. ನೀವು ನೀವಾಗಿರಿ. ಶ್ರಮ ವಹಿಸಿ. ಮುಂದುವರಿಯಿರಿ' ಎಂದಿದ್ದಾಳೆ ಸೋನಾಕ್ಷಿ.

ಕಲಾವಿದರ ಕುರಿತು ಕುಳಿತಲ್ಲೇ ತೀರ್ಮಾನಿಸುವವರ ಕುರಿತು ನಾನು ಕೇರ್ ಮಾಡುವುದಿಲ್ಲ ಎನ್ನುವ ಸೋನಾಕ್ಷಿ, ಆದರೆ ಚಿತ್ರರಂಗ ಬದಲಾಗುತ್ತಿದೆ ಎಂದು ಖುಷಿ ಹಂಚಿಕೊಳ್ಳುತ್ತಾಳೆ. 'ಮಹಿಳೆಯರನ್ನು ಮನಸಿನಲ್ಲಿ ಇಟ್ಟುಕೊಂಡು ಅದ್ಭುತವಾದ ಪಾತ್ರಗಳನ್ನು ಸೃಷ್ಟಿಸಲಾಗುತ್ತಿದೆ. ಮಹಿಳೆಯೇ ಪ್ರಧಾನವಾಗಿರುವ ಸಿನಿಮಾಗಳನ್ನು ಮಾಡಲಾಗುತ್ತಿದೆ. ಅಸಮಾನತೆಯ ಮಟ್ಟ ಇಳಿಕೆಯಾಗುತ್ತಿದೆ. ನಟಿಯರು ಬಾಕಿ ಉಳಿದುಕೊಂಡಿದ್ದ ಅವಕಾಶಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಉದ್ಯಮದಲ್ಲಿ ಇರಲು ಇದು ಒಳ್ಳೆಯ ಕಾಲ' ಎಂದು ಹೇಳಿದ್ದಾಳೆ.

'ಅಕಿರಾ' ಚಿತ್ರಕ್ಕೆ ಬಂದ ಪ್ರತಿಕ್ರಿಯೆ ನೋಡಿ ಸೋನಾಕ್ಷಿ ಥ್ರಿಲ್ ಆಗಿದ್ದಾಳಂತೆ. ಇಡೀ ಸಿನಿಮಾ ತನ್ನ ಹೆಗಲ ಮೇಲೆಯೇ ಇತ್ತು. ಬಾಕ್ಸ್‌ಆಫೀಸ್‌ನ ಗಳಿಕೆಯೂ ಉತ್ತಮವಾಗಿದೆ. ಹೀಗಾಗಿ ಸಿನಿಮಾ ಲಾಭ ಮಾಡಿರಬಹುದು ಎನ್ನುವ ಆಕೆ ಮತ್ತೆ ಅಂತಹ ಸಿನಿಮಾಗಳನ್ನು ಮಾಡಲು ಹಂಬಲಿಸುತ್ತಿದ್ದಾಳೆ.

ತನ್ನ ತಂದೆ ಶತ್ರುಘ್ನ ಸಿನ್ಹಾರ ಜೀವನಗಾಥೆಯನ್ನು ಸಿನಿಮಾ ಮಾಡಲು ರಣವೀರ್ ಸಿಂಗ್ ಮಾತ್ರ ಸೂಕ್ತವಾದ ನಟ ಎನ್ನುವುದು ಸೋನಾಕ್ಷಿ ಅಭಿಪ್ರಾಯ. ತಮ್ಮ ಕುರಿತು ಸಿನಿಮಾ ಮಾಡುವುದಾದರೆ ರಣವೀರ್ ತಾವಾಗಿ ಕಾಣಿಸಿಕೊಳ್ಳಬೇಕು ಎಂದು ಶತ್ರುಘ್ನ ಕೂಡ ಆಸೆ ವ್ಯಕ್ತಪಡಿಸಿದ್ದರು. 'ಲುಟೇರಾ'ದಲ್ಲಿ ರಣವೀರ್ ಜತೆ ತೆರೆ ಹಂಚಿಕೊಂಡಿದ್ದ ಸೋನಾಕ್ಷಿಗೆ ಅಪ್ಪನ ಜೀವನಕಥೆಯಲ್ಲಿ ನಟಿಸಲು ಆತನಿಗಿಂತ ಬೇರೆ ಯೋಗ್ಯ ನಟನಿಲ್ಲ ಎನಿಸಿದೆ.

# ಹಾಲಿವುಡ್ ಸವಾಲು

ನಟ ಇರ್ಫಾನ್ ಖಾನ್, ಸಪ್ತಸಾಗರದಾಚೆಗಿನ ಸಿನಿಮಾ ಲೋಕವನ್ನೂ ಸೆಳೆದ ಅದ್ಭುತ ಕಲಾವಿದ. ಬಾಲಿವುಡ್‌ನಲ್ಲಿ ವೈವಿಧ್ಯಮಯ ಪಾತ್ರಗಳನ್ನು ಪೋಷಿಸುತ್ತಿರುವ ಇರ್ಫಾನ್‌ಗೆ ಹಾಲಿವುಡ್ ಅನೇಕ ಬಾರಿ ಕೆಂಪು ಹಾಸು ಹಾಸಿದೆ. ಒಳ್ಳೆಯ ಪಾತ್ರ ಸಿಕ್ಕಾಗ ಇರ್ಫಾನ್ ಕೂಡ ಹೂಂ ಎಂದಿದ್ದಿದೆ. ನಟನಾಗಿ ಹಾಲಿವುಡ್‌ಅನ್ನು ಮೆಚ್ಚಿಕೊಂಡರೂ 'ಚಿತ್ರರಂಗದ ಬೆಳವಣಿಗೆಯ ದೃಷ್ಟಿಯಿಂದ ಹಾಲಿವುಡ್, ಭಾರತೀಯ ಸಿನಿಮಾಗಳ ಪಾಲಿಗೆ ಕಂಟಕವಾಗುತ್ತಿದೆ' ಎನ್ನುವುದು ಇರ್ಫಾನ್ ಅಭಿಪ್ರಾಯ.

'ಹಾಲಿವುಡ್ ಸಿನಿಮಾಗಳಿಗೆ ಭಾರತದಲ್ಲಿನ ಮಾರುಕಟ್ಟೆ ವೇಗವಾಗಿ ವಿಸ್ತಾರವಾಗುತ್ತಿದೆ. ಇದರಿಂದ ಭಾರತೀಯ ಸಿನಿಮಾಗಳಿಗೆ ತೊಡಕುಗಳು ಎದುರಾಗುತ್ತಿವೆ. ಅನೇಕ ದೇಶಗಳ ಮೂಲ ಸಿನಿಮಾಗಳ ಮಾರುಕಟ್ಟೆಯನ್ನು ಹಾಲಿವುಡ್ ಆಕ್ರಮಿಸಿದೆ. ಅದು ಬೆಳೆಯುತ್ತಿರುವ ವೇಗ ನೋಡಿದರೆ ಭಾರತೀಯ ಮಾರುಕಟ್ಟೆಯನ್ನೂ ಆಕ್ರಮಿಸುವ ಅಪಾಯವಿದೆ. ಇದು ಭಾರತೀಯ ಸಿನಿಮಾ ಉದ್ಯಮದ ಮುಂದಿರುವ ದೊಡ್ಡ ಸವಾಲು' ಎಂದು ಗುರುತಿಸಿದ್ದಾನೆ ಇರ್ಫಾನ್. ವಾರದಿಂದ ವಾರಕ್ಕೆ ಹಾಲಿವುಡ್ ಮತ್ತಷ್ಟು ಹಿಗ್ಗಿಕೊಳ್ಳುತ್ತಿದೆ ಎಂಬ ಕಳವಳ ಆತನದು.

'ನಾನು ಹಾಲಿವುಡ್ ಅಥವಾ ಬಾಲಿವುಡ್‌ನಲ್ಲಿ ಕೆಲಸವನ್ನು ಹೆಚ್ಚು ಇಷ್ಟಪಡುತ್ತೇನೆ ಎಂದೇನಿಲ್ಲ. ಕೆಲಸವೇ ನನ್ನನ್ನು ವಿಭಿನ್ನ ಸ್ಥಳಗಳು ಮತ್ತು ಸಿನಿಮಾ ಉದ್ಯಮಗಳತ್ತ ಕರೆದೊಯ್ಯುತ್ತವೆ' ಎಂದಿದ್ದಾನೆ ಆತ. 'ಇದು ನನ್ನ ದೇಶ. ನಾನು ನಟನಾದದ್ದು ಇಲ್ಲಿಯೇ. ನಾನು ಎಂದಿಗೂ ಕೆಲಸ ಮಾಡುತ್ತೇನೆ ಎಂದು ಊಹಿಸಿಯೂ ಇರದಿದ್ದ ಪಶ್ಚಿಮದ ಸಿನಿಮಾಗಳಲ್ಲಿಯೂ ಅವಕಾಶ ಸಿಕ್ಕಿತು. ನನಗೆ ಎರಡೂ ಉದ್ಯಮಗಳು ಮುಖ್ಯವೇ. ಯುರೋಪ್‌ನ ಸಿನಿಮಾಗಳಲ್ಲಿಯೂ ಈಗ ನಟಿಸುತ್ತಿದ್ದೇನೆ. ನಾನೊಬ್ಬ ನಟ. ಆಸಕ್ತಿಕರ ಕೆಲಸಗಳನ್ನು ಎಲ್ಲಿ ಕಂಡರೂ ಅದನ್ನು ಮಾಡುತ್ತೇನೆ' ಎಂದಿದ್ದಾನೆ ಇರ್ಫಾನ್.

'ದಿ ನೇಮ್‌ಸೇಕ್', 'ಎ ಮೈಟಿ ಹಾರ್ಟ್', 'ಲೈಫ್ ಆಫ್ ಪೈ', 'ಅಮೇಜಿಂಗ್ ಸ್ಪೈಡರ್‌ಮ್ಯಾನ್', 'ಜುರಾಸಿಕ್ ವರ್ಲ್ಡ್'ದಂತಹ ಚಿತ್ರಗಳಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿರುವ ಇರ್ಫಾನ್‌ನ ಮತ್ತೊಂದು ಹಾಲಿವುಡ್ ಚಿತ್ರ 'ಇನ್‌ಫೆರ್ನೊ' ತೆರೆ ಕಾಣಲು ಸಿದ್ಧವಾಗುತ್ತಿದೆ.

■ ಅಮಿ

